International Journal of Kannada Research 2016; 2(2): 38-40

International Journal of Kannada Research
www.kannadajournal.com

ISSN: 2454–5813
IJSR 2016; 2(2): 38-40
© 2016 IJKS
www.kannadajournal.com
Received: 08-12-2015
Accepted: 10-01-2016

**ಮೋನಪ್ಪ ಎಲ್. ಸುತಾರ**
ಸಂಶೋಧನಾ ವಿದ್ಯಾರ್ಥಿ
ಕನ್ನಡ ಅಧ್ಯಯನ ಸಂಸ್ಥೆ.
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

**Correspondence**
**ಮೋನಪ್ಪ ಎಲ್. ಸುತಾರ**
ಸಂಶೋಧನಾ ವಿದ್ಯಾರ್ಥಿ
ಕನ್ನಡ ಅಧ್ಯಯನ ಸಂಸ್ಥೆ.
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

# ಶಿವಯೋಗ ಸಾಧನೆ ಮತ್ತು ಸಾಹಿತ್ಯ ಸೃಷ್ಟಿ

**ಮೋನಪ್ಪ ಎಲ್. ಸುತಾರ**

ಕನ್ನಡ ನಾಡು ಶರಣ ಪರಂಪರೆಯ ನೆಲೆ ಬೀಡು, ವಿಶ್ವಜೀವಕೋಟಿಗೆ ಅಧ್ಯಾತ್ಮದ ಅಮೃತವನ್ನು ಉಣಬಡಿಸಿದ ಪುಣ್ಯಭೂಮಿ. ಶರಣ ಶ್ರೇಷ್ಠ ವೀರ–ವೀರಾಗಿ ಅಲ್ಲಮಪ್ರಭು ಆದಿಯಾಗಿ ವಿಶ್ವಗುರು ಬಸವೇಶ್ವರರ ಜ್ಞಾನ ದಿಗಂತದ ಜ್ಯೋತಿಯ ಬೆಳಕು ಪಸರಿಸಿದ ಯತಿಪುಂಗರಿಗೆ ಆಶ್ರಯ ನೀಡಿದ ತಾಣ. ಶಿವಯೋಗ ಸಾಧನೆಯಲ್ಲಿ ತೊಡಗಿ ಮನುಕುಲದ ಉದ್ಧಾರಕ್ಕಾಗಿ ಸಜ್ಜಾಗಿ ಅದೆಷ್ಟೋ ಶರಣರು, ಸಂತರು, ತಮ್ಮ ಜೀವವನ್ನೆ ಸವೆಸಿದ್ದಾರೆ.

ಶಿವಯೋಗ ಸಾಧನೆ ಉತ್ತುಂಗಕೇರಿದ ಸಮಯದಲ್ಲಿ ಘಟಕೊಂದು ಮಠವಾಯಿತು. ಹೀಗಿರುವಾಗ ಕರ್ನಾಟಕದ ಪ್ರಸಿದ್ದ ಜಿಲ್ಲೆ ಹಾವೇರಿ ನಗರವು 63 ಮಠಗಳನ್ನು ಹೊಂದಿ ಮರಿಕಲ್ಯಾಣ ಎನಿಸಿಕೊಳ್ಳುವುದರಲ್ಲಿ ವಿಸ್ಮಯವನ್ನುಂಟು ಮಾಡುವುದಿಲ್ಲ. ಏಕೆಂದರೆ ದೇಹವೆ ದೇವಾಲಯವೆಂದು ಸಾರಿದ ಶರಣರು, ಸಮಾಜೋದ್ಧಾರಕರಾಗಿ ಜಂಗಮಸ್ಥಲದ ಮಹತಿಯನ್ನು ಸಾರಿದರು. ಅಂತೆಯೇ ಮಠಗಳ ಸಂಖ್ಯೆ ಬೆಳೆಯಿತು ಆದರೆ ಮಠಕ್ಕೆ ಬಂದವರು ತಟಸ್ಥರಾದರೆ ಮಠ ಕತ್ತಲಲ್ಲಿ ಮುಳುಗಿ ಹೋಗುತ್ತದೆ. ಬಂದವರು ಚೇತನಶೀಲರಾದರೆ ತಮಂದವಳಿದು ಜ್ಯೋತಿ ಬೆಳಗಿ ಮನುಕುಲದ ಉದ್ದಾರವಾಗುತ್ತದೆ, ಅಂತೆಯೇ ಹಾವೇರಿ ಜಿಲ್ಲೆಯ ಹುಕ್ಕೇರಿ ಮಠದ ಪರಮಪೂಜ್ಯ ಶ್ರೀ ಶಿವಲಿಂಗ ಶಿವಯೋಗಿಗಳು ತಮಂದವಳಿದು ಬೆಳಕು ಚೆಲ್ಲಿದರು. ಮಠದಿಂದ ಘಟ ಬೆಳಸಿಕೊಳ್ಳಲಿಲ್ಲ. ಘಟದಿಂದ ಮಠ ಬೆಳಸಿಕೊಂಡರು. ಮೆಲ್ಲ–ಮೆಲ್ಲನೆ ಭಕ್ತರಾಗುವ ಯುಕ್ತಿಯನ್ನು ತಿಳಿಸಿದರು. ತುತ್ತಿನೊಳಗೊಂದು ಅರ್ಥವಿಟ್ಟು ನಿತ್ಯ ದಾಸೋಹಿಗಳಾಗಿರಿ ಎಂದು ಬೋಧಿಸಿದರು. ಉಂಭ ಬಟ್ಟಲದನ್ನ ಸತ್ಯಶುದ್ಧ ಕಾಯಕದಿಂದ ತುಂಬಬೇಕೆಂದು ಬಿಂಬಿಸುವ ಮೂಲಕ “ಕಾಯಕವೇ ಕೈಲಾಸ” ಎಂಬುವುದನ್ನು ಅರವಿಗೆ ತಂದರು. ನಿತ್ಯ ಭಜನೆ, ಕೀರ್ತನೆ ಮಾಡುವ ಮುಖಾಂತರ ಶಿವಪಥದ ಮಾರ್ಗ ತಿಳಿಸಿದರು.

ಯತಿಶ್ರೇಷ್ಠ ಶ್ರೀ ಮ.ನಿ.ಪ್ರ. ಶಿವಲಿಂಗ ಶಿವಯೋಗಿಗಳು ಕಟ್ಟಿ ಬೆಳಸಿದ ಇನ್ನೊಂದು ಮಠ ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನ ಮಾದನ ಹಿಪ್ಪರ್ಗಿಯಲ್ಲಿದೆ.“ಶ್ರೀ ಶಿವಲಿಂಗೇಶ್ವರ ವಿರಕ್ತ ಮಠ”ಎಂಬ ನಾಮದಿಂದ ಭಕ್ತಶ್ರೇಷ್ಠತೆಗೆ ಹೆಸರುವಾಸಿಯಾಗಿದೆ. ಇಲ್ಲಿ ದೇವರಿಗಿಂತ ಭಕ್ತರೆ ಶ್ರೇಷ್ಠರು. ಭಕ್ತಿಮಡುಗಟ್ಟಿ ಸುಜ್ಞಾನ ಪ್ರಭಾಕರ ಶಿವಲಿಂಗಯೋಗಿಯ ಹೃದಯ ಗದ್ದುಗೆಯಲ್ಲಿ ನೆಲಸಿದರು. ಈ ಎರಡು ಮಠಗಳು ಪೂಜ್ಯರ ಎರಡು ಕಣ್ಣುಗಳಂತೆ ಬಿಂಬಿತವಾದವು. ಗುರುವಿನ ನಿತ್ಯ ನೂತನ ನುಡಿಗಳೇ ಪಾಠ ಬೋದನೆಗಳಾದವು. ಧರ್ಮ, ಸಭೆ ಸಮಾರಂಭಗಳಿಂದ ಹೊರಹೊಮ್ಮಿದ ಪ್ರವಚನಗಳೇ ಸಹಜ ಮಾನವನನ್ನು ಸಾಹಿತ್ಯಕ್ಕಿಳಿಸಿದವು. ಆಲೋಚನಾ ಚಿತ್ತ ಬದಲಿಸಿ ತನ್ನೊಳಗಿನ ಕವಿಯನ್ನು ಕೆರಳಿಸಿದವು. ಈ ಎರಡು ಮಠಗಳಲ್ಲಿ ಸುಮಾರು 60ಕ್ಕು ಹೆಚ್ಚು ಪುಸ್ತಕಗಳು ಪ್ರಕಟವಾದದ್ದು ಶ್ರೀಗಳ ಪ್ರಭಾವದಿಂದ ಎಂದು ಬೇರೆ ಹೇಳಬೇಕಾಗಿಲ್ಲ. ಜಿವನ ಚರಿತ್ರೆ, ಕಥೆ, ಕಾದಂಬರಿ, ನಾಟಕ ಸಂಪಾದಿತ ಕೃತಿ ಅಲ್ಲದೆ ಮಹಾಕಾವ್ಯಗಳು ವಚನ ಸಾಹಿತ್ಯ ಸೇರಿದಂತೆ ಅನೇಕ ಲೇಖಕರಿಗೆ ಬೆಳಸಿ ಸಾಹಿತ್ಯ ಶ್ರೀಮಂತಿಕೆಯನ್ನು ಮೆರೆದದ್ದು ಹೆಮ್ಮೆಯ ಸಂಗತಿ.

ಶರಣರಾದವರು ಲಿಂಗ ಪೂಜೆ, ಜಪ–ತಪಗಳು ಮಾಡಿದರೆ ಸಾಲದೆಂದ್ದು ಸ್ವತ: ಉತ್ಕೃಷ್ಠ ಸಾಹಿತ್ಯ ರಚನೆಮಾಡಿ ಮಾರ್ಗದರ್ಶಕರಾದರು. ಬರವಣಿಗೆಯಲ್ಲಿ ಅಗಾದ ಪಾಂಡಿತ್ಯ ಪಡೆದ ಶ್ರೀಗಳು ಅದನ್ನೆ ಮುಂದುವರಿಸಿದ್ದಾದರೆ ಡಾ.ಭೋಜರಾಜ ಪಾಟೀಲರವರು ತಮ್ಮ “ಶಿವಲಿಂಗ ಸಂಪದ” ಕೃತಿಯಲ್ಲಿ ಹೇಳಿರುವಂತೆ ಕನ್ನಡದ ಸಾಹಿತ್ಯಕೊಬ್ಬ ಮಹತ್ವದ ಕವಿ, ವಿಮರ್ಶಕರಾಗಿ ರೂಪುಗೊಳ್ಳುತ್ತಿದ್ದರು. ವೀರಶೈವ ಸಾಹಿತಿ–ಮಹಾಸ್ವಾಮಿಗಳವರಲ್ಲಿ ತಮ್ಮದೆಯಾದ ವಿಶಿಷ್ಟ ಸ್ಥಾನಮಾನ ಹೊಂದುತ್ತಿದ್ದರು. ಆದರೆ ಶಿವಯೋಗದ ಪರಮ ಪ್ರಸಾದದ ರುಚಿ ಕಂಡ ಅವರು ಅದೇ ಪಥದಲ್ಲಿ ಮುಂದುವರೆದು ಬಿಟ್ಟರು. ಹೀಗಾಗಿ ಸಾಹಿತಿಯಾಗುವ ಬದಲು ಶಿವಯೋಗಿಗಳಾದರು. ವೀರಶೈವ ಶಿವಯೋಗಿಗಳಲ್ಲಿ ಓರ್ವರಾದರು.

ಮನಸ್ಸು ಮಾಡಿದರೆ, ಶ್ರಮ ಪಟ್ಟರೆ ಯಾರು ಬೇಕಾದರೂ ಸಾಹಿತಿಗಳಾಗಬಹುದು, ಅಂದರೆ ಇದು ಸಾಹಿತ್ಯ ಕುರಿತು ಹಗುರವಾದ ಧೋರಣೆಯಲ್ಲ. ಆದರೆ ಪಂಚೇಂದ್ರಿಯಗಳನ್ನು ಶುದ್ದಮಾಡಿಕೊಂಡು ಶಿವಯೋಗಿಗಳಾಗುವುದು ಕಷ್ಟಸಾದ್ಯ. ಈ ಕಾರ್ಯವನ್ನು ಪೂಜ್ಯ ಶ್ರೀಶಿವಲಿಂಗ ಶಿವಯೋಗಿಗಳು ಕೈಗೊಂಡಿರುವದು ಶ್ಲಾಘನೀಯ.

ಸಾಧಕನೊಬ್ಬ ಸತ್ಯಾನ್ವೇಷಣೆಗೆ ತೊಡಗಿದಾಗ ಅವನಲ್ಲಿ ಕೆಲವೊಂದು ಅಲೌಕಿಕ ಶಕ್ತಿಗಳು ಸಹಜವಾಗಿ ಮೈದೋರುತ್ತವೆ. ಈ ಅಲೌಕಿಕ ಶಕ್ತಿಗಳಿಗೆ ಸಿದ್ಧಿಗಳೆಂದು ಯೋಗಶಾಸ್ತ್ರಭಾಷೆಯಲ್ಲಿ ಕರೆಯಲಾಗಿದೆ. ಆತ್ಮ ಸಾಕ್ಷಾತ್ಕಾರವಾಗಿ ಯೋಗಮಾರ್ಗವನ್ನು ಕ್ರಮಿಸುವಾಗ ಹುಟ್ಟಿಕೊಂಡ ಉಪನಿಷತ್ತುಗಳೆ ಸಿದ್ಧಿಗಳು. ಈ ಸಿದ್ಧಿಗಳ ಪ್ರದರ್ಶನವನ್ನೆ ಲೀಲೆಗಳು-ಪವಾಡಗಳು ಎಂದು ಬಗೆ-ಬಗೆಯ ಹೆಸರಿನಲ್ಲಿ ಕರೆಯುತ್ತಾರೆ.

ವೀರಶೈವರು ಆಚರಿಸುವ ಶಿವಯೋಗದಲ್ಲಿ ಅಷ್ಟಾಂಗ ಯೋಗದ ಅತಿ ಮಹತ್ವದ ಕೊನೆಯ ಮೂರು : ಧ್ಯಾನ, ಧಾರಣ ಮತ್ತು ಸಮಾಧಿಗಳು ಸೇರಿವೆ. ಆದ್ದರಿಂದ ಶಿವಯೋಗ ಆಚರಿಸುವವರಲ್ಲಿ ಅವರು ಇಚ್ಚಿಸಲಿ ಇಚ್ಚಿಸದಿರಲಿ ಅಲೌಕಿಕ ಶಕ್ತಿ ಕೇಂದ್ರಿಕೃತವಾಗಿ ಬಿಡುತ್ತದೆ ಶಿವಯೋಗದೊಡನೆ ಶೀಲ, ಬ್ರಹ್ಮಚರ್ಯಗಳನ್ನು ಕಾಯ್ದುಕೊಂಡು ಸತ್ಯ, ಪ್ರೀತಿ, ಅಹಿಂಸೆ, ಕ್ಷಮದಾನಗಳಂತಹ ಗುಣಗಳನ್ನು ಅಳವಡಿಸಿಕೊಂಡಿದ್ದಾದರೆ, ಈ ಅಲೌಕಿಕ ಶಕ್ತಿ ಅಪರಂಪರವಾಗಿ ಬಿಡುತ್ತದೆ. ವೀರಶೈವ ಶರಣರು, ಸ್ವಾಮಿಗಳು, ಹಾಗು ಶಿವಯೋಗಿಗಳು ಇಂತಹ ಎಲ್ಲ ಲಕ್ಷಣಗಳನ್ನು ಒಳಗೊಂಡಿರುವರಾಗಿದ್ದರಿಂದ ಅವರು ಅಲೌಕಿಕ ಶಕ್ತಿಯ ಮಹಾ ಸಾಗರಗಳಾಗಿ ನಿಂತುಬಿಡುತ್ತಾರೆ. ಶಿವಯೋಗದ ಅಂತಿಮ ಮನೆಯನ್ನ ಇವರು ಮುಟ್ಟಿಬಿಟ್ಟವರಾಗಿರುವುದ್ದರಿಂದ ಲಿಂಗವ ಪೂಜಿಸಿ ಲಿಂಗವೇ ಆಗಿರುವುದು ಸೃಷ್ಟಿಯನ್ನಾಳುವ ಪಂಚಮಹಾಭೂತಗಳು ದಾಸಾನುದಾಸರಂತೆ ವರ್ತಿಸುತ್ತವೆ.

ಶಿವಯೋಗಿಗಳ ವಿದ್ಯಾದರ್ಶನಕ್ಕೆ ಭೂತ-ಭವಿಷ್ಯತ್ ವರ್ತಮಾನ ಕಾಲದ, ದೇಶಗಳ ಪ್ರತಿಬಂಧಕವಾಗಲಾರವು. ಸಾಮಾನ್ಯ ಪ್ರಾಣಿಯು ಪ್ರಶಾಂತದಲ್ಲಿ ಹೇಗೆ ತನ್ನ ಎದುರಿನಲ್ಲಿರುವ ಪದಾರ್ಥಗಳನ್ನು ಸ್ಪಷ್ಟವಾಗಿ ಕಾಣುತ್ತದೆಯೋ, ಹಾಗೆ ಯಾವ ದೇಶಕಾಲಗಳಲ್ಲಿಯೂ ನಡೆಯದಿರತಕ್ಕ ನಡೆದುಹೊಗುವ, ನಡೆಯಲಿರುವ ಘಟನೆಗಳ ಮೇಲಿನ ದಿವ್ಯ ಚಕ್ಷುವಿನಿಂದ ನೋಡುತ್ತಾನೆ. ದಿವ್ಯದರ್ಶಿ ಶಿವಯೋಗಿ ಯೋಗಸೂತ್ರದಲ್ಲಿ ಪತಂಜಲಿ ಮಹರ್ಷಿಗಳು ವಿಭೂತಿಪಾದದಲ್ಲಿ ಇದನ್ನೆ ವರ್ಣಿಸಿದ್ದಾರೆ ಶಿವಯೋಗದ ಬಲದಿಂದ ಅನೇಕ ಅದ್ಭುತ ಲೀಲೆಗಳು ತಾವಾಗಿಯೇ ತೋರಿ ಬಂದಿವೆ. ಮಾಹತ್ಮರ ಲೀಲೆ ಜನರಕಲ್ಯಾಣಕ್ಕಾಗಿ ಅವರು ಸದಾಶಿವರೂಪರು ಮಂಗಳ ಮೂರ್ತಿಗಳು ಹಾಗು ಪರಮ ಪೂಜ್ಯ ಶ್ರೀಶಿವಲಿಂಗ ಶಿವಯೋಗಿಗಳು ಶಿವಲಿಂಗ ಪೂಜೆಯ ಬಲದಿಂದ ಸ್ವತ: ಸಿದ್ದರಾಗಿ ವಿರಕ್ತ ಕುಲಕ್ಕೆ ಮುಕುಟ ಪ್ರಾಯರಾಗಿದ್ದರು

ಪೂಜ್ಯರು ಪವಾಡ ಲೀಲೆಗಳನ್ನು ಮಾಡಲೆಂದೆ ಶಿವಯೋಗ ಸಾಧಿಸಿಕೊಂಡವರಲ್ಲ. ಅದು ಅವರ ಉದ್ದೇಶವೂ ಆಗಿರಲಿಲ್ಲ. ಆದರೆ ಭಕ್ತ ಕುಲಕೋಟಿ ಗುರುತಿಸುತ್ತಾ ಹೋದಂತೆ ಅವರ ಜೀವನದುದ್ದಕ್ಕು ಪವಾಡ ಸದೃಶ ಘಟನೆಗಳು ಸಹಜವಾಗಿ ಸಾಗಿ ಬಂದಿವೆ. ಲೋಕಹಿತಕ್ಕಾಗಿ ನಡೆದ ಅನೇಕ ಪವಾಡಗಳು ನಂಬಿದವರ ರಕ್ಷಣೆಗಾಗಿ ನಡೆದರೆ ಒಳಿತು. ಆದರೆ ವ್ಯತಿರಿಕ್ತವಾದರೆ ಶಿವಯೋಗ ಸಾಧನೆಯ ಶಕ್ತಿಯ ಹಾನಿಗೆ ಆಹ್ವಾನವೂ ಹೌದು. ಇದನರಿತ ಶ್ರೀಶಿವಲಿಂಗಶಿವಯೋಗಿಗಳು ಅಲೌಕಿಕ ಮಹಾನ ಪುರುಷರು ಎಂದು ಮತ್ತೆ ಹೇಳುವ ಅಶ್ಯಕತೆಯೇ ಇರುವುದಿಲ್ಲ.

ಪೂಜ್ಯರ ಜೀವನವೆ ಲೀಲಾಮಯ ತಮ್ಮ ಶಿವಯೋಗದ ಬಲದಿಂದ ಬಡವರನ್ನು ಉದ್ಧರಿಸಿದ್ದಾರೆ, ಕುರುಡರಿಗೆ ಕಣ್ಣು ಬರಸಿದ್ಧಾರೆ, ಸಂಕಷ್ಟದಲ್ಲಿದ್ದವರನ್ನು ಪಾರು ಮಾಡಿದ್ಧಾರೆ, ಸಂತಾನ ಭಾಗ್ಯ ಇಲ್ಲದವರಿಗೆ ತಮ್ಮ ಕೃಪಾಶೀರ್ವಾದದ ಬಲದಿಂದ್ಧ ಸಂತಾನ ಭಾಗ್ಯ ಕರುಣಿಸಿದ್ಧಾರೆ, ಬರಿಗೈಯಾಗಿ ಜೀವನದಲ್ಲಿ ನೊಂದು ಬೆಂದ ಭಕ್ತರನ್ನು ಉದ್ಧರಿಸಿದ್ಧಾರೆ, ಆಪತ್ಕಾಲದಲ್ಲಿ ಆಪ್ತಬಾಂಧವರಾಗಿ ನೆರವಾಗಿದ್ದಾರೆ. ಮರಣಶಯ್ಯೆಯಲ್ಲಿ ಇರುವವರಿಗೆ ಅಭಯ ವಚನಗಳ ಮೂಲಕ ಪ್ರಾಣದಾನ ಮಾಡಿದ ಕಾಲನ ಗೆದ್ದ ಮೃತ್ಯುಂಜಯವಾಗಿದ್ದಾರೆ. ಹೀಗೆ ಇನ್ನೂ ಹೇಳುತ್ತಾ ಹೋದರೆ ಲೀಲೆಗಳ ಕುರಿತೇ ಒಂದು ಹೊತ್ತಗೆ ಯಾದೀತು!

ಶ್ರೀ ಮ.ನಿ..ಪ್ರ ಶಿವಲಿಂಗ ಶಿವಯೋಗಿಗಳ ಗದ್ಯ-ಪದ್ಯ ಹಾಗು ಲೇಖನಗಳು ಸೇರಿದಂತೆ ಒಟ್ಟು ಹತ್ತೊಂಬತ್ತಕ್ಕೂ ಹೆಚ್ಚು ಬರವಣಿಗೆಗಳು. ಪ್ರಭುಲಿಂಗಲೀಲೆಯ ಪ್ರವಚನದ ಮೇಲೆ ಶಿವಲಿಂಗ ಕಂಡ ಪ್ರಭುಲಿಂಗ ಎಂಬ ಗದ್ಯ ಮಸ್ತಕವೂ ಸೂಕ್ತಿಸುಧಾ ಎಂಬ ತಾತ್ವಿಕ ಕೃತಿಯೂ ಪ್ರಕಟವಾಗಿವೆ. ಸಹಸ್ರ ಚಂದ್ರದರ್ಶನ ಸಮಾರಂಭ ನಿಮಿತ್ಯ ಆರಿಸಿದ ಸಂಸ್ಕೃತ ಸುಭಾಷಿತ ಶ್ಲೋಕಗಳು ಹಾಗು ಅವುಗಳಿಗೆ ಕನ್ನಡದಲ್ಲಿ ವ್ಯಾಖ್ಯಾನ ಸೇರಿದಂತೆ ಒಂದು ಕೃತಿಯು ಬಿಡುಗಡೆಯಾಗಿದೆ. ಅವರ ಸಾಹಿತ್ಯ ಸೃಷ್ಟಿಯ ಬಗೆಗೆ ಅಧ್ಯಾಪಕರಾದ ಜಿ.ಎಂ,ಉಮಾಪತಿ ಶಾಸ್ತ್ರಿಗಳು ಹೀಗೆ ಬರೆದಿದ್ದಾರೆ.

ಶ್ರೀ ಶಿವಯೋಗಿ ದೇಶಿಕರು ಕಾಶಿಯಲ್ಲಿ ಇದ್ದಾಗಲೆ 1937 ರಲ್ಲಿ ಶಿವಾನುಭಾವ ಮಾಸ ಪತ್ರಿಕೆಯಲ್ಲಿ "ಶ್ರೀಮದ್‌ಜಗದ್ಗುರು ಬಸವಣ್ಣನವರು" ಎಂಬ ಲೇಖನ ಬರೆದರು ಬಸವಣ್ಣನವರು ಮಾಡಿದ ಕ್ರಾಂತಿಯ ಬಗೆಗೆ ಅಭಿಪ್ರಾಯ ಸಮರ್ಥವಾಗಿ ಮಂಡಿಸಿ ಅವರ ವಚನದಲ್ಲಿ ಬರುವ ಸಾಹಿತಿಕ ಮೌಲ್ಯ ಮತ್ತು ಅಲಂಕಾರಿಕ ಸೌಂದರ್ಯದ ಬಗೆಯನ್ನು ವಿನೂತನವಾಗಿ ಪ್ರಸ್ತಾಪಿಸಿದರು. ಆ ಲೇಖನವನ್ನು ಶಿವಾನುಭವ ಪತ್ರಿಯ ಸಂಚಾಲಕರಾದ ವಿಜಯಪುರದ ವಚನ ಪಿತಾಮಹ ಫ.ಗು. ಹಳಕಟ್ಟಿಯವರು ಬಹುವಾಗಿ ಮೆಚ್ಚಿಕೊಂಡರು. ಅದೆ ಪತ್ರಿಕೆಯ ಸಂಚಿಕೆಯೊಂದರಲ್ಲಿ ಸದ್ಯದ ಸಾಹಿತ್ಯ ಪ್ರಪಂಚದಲ್ಲಿ ಹಾನಗಲ್ಲ ಶಿವಯೋಗಿಗಳ ಸ್ಥಾನ" ಎಂಬ ಲೇಖನ ಬರೆದು ತಮ್ಮ ಪರಮ ಗುರುವಾದ ಹಾನಗಲ್ಲ ಶ್ರೀ ಕುಮಾರ ಶಿವಯೋಗಿಗಳು ರಚಿಸಿದ ಶಿವಯೋಗ ಅಂಕಿತವಿರುವ ಅಧ್ಯಾತ್ಮಪರ ಪದಗಳನ್ನು ಸಾಹಿತ್ಯ-ವಿಮರ್ಶ ದೃಷ್ಠಿಯಿಂದ ವಿವೇಚಿಸಿದರು. ಪೂಜ್ಯರ ಆತ್ಮಗೀತೆಗಳಿಗೆ ಕನ್ನಡ ಸಾಹಿತ್ಯ ಪ್ರಪಂಚದಲ್ಲಿರುವ ಅಗ್ರಸ್ಥಾನವನ್ನು ಗುರುತಿಸಿಕೊಟ್ಟರು.

ಹರಿಹರ ದೇವನ ರಕ್ಷಾಶತಕ ಎಂಬ ಲೇಖನದಲ್ಲಿ ಕನ್ನಡ ಕವಿ ಸಾರ್ವಭೌಮ ಹರಿಹರ ದೇವನ ಕಾವ್ಯ ಸೌಂದರ್ಯವನ್ನು ಅಧ್ಯಾತ್ಮದ ಹಿನ್ನಲೆಯಲ್ಲಿ ವಿವೇಚಿಸಿದ್ದಾರೆ. ಸಂಸ್ಕೃತ ಕಾವ್ಯಗಳನ್ನು ಆಳವಾಗಿ ಅಭ್ಯಷಿಸಿ, ಅವುಗಳ ಮೌಲ್ಯವನ್ನು ವಿಮರ್ಶೆಯ ಒರೆಗಲ್ಲಿಗೆ ಹಚ್ಚುವ ಶಿವಯೋಗಿ ದೇಶಿಕರ ಪ್ರತಿಭೆ ಅನಾದೃಶ್ಯ. ಮಹಾಕವಿ ಕಾಳಿದಾಸನ ಅಮರ ಸಂದೇಶ ಎಂಬ (1950 ರಲ್ಲಿ ಬರೆದ ) ಲೇಖನದಲ್ಲಿ ಶಿವಯೋಗಿ ದೇಶಿಕರ ಸಂಸ್ಕೃತ ಕಾವ್ಯಭ್ಯಾಸ ಎದ್ದು ಕಾಣುತ್ತದೆ. ಸಮಸ್ತ ವಿಶ್ವದ ಹಿತಚಿಂತಕನಾದ ಮಹಾಕವಿ ಕಾಳಿದಾಸನ ದಿವ್ಯ ಸಂದೇಶ ಬಿರುವ ಈ ಲೇಖನ ಉತ್ತಮ ಕನ್ನಡ ವಿಮರ್ಶೆಗೊಂದು ನಿದರ್ಶನ.

1950ರಲ್ಲಿ ಸುಕುಮಾರ ಮಾಸಿಕ ಜಿ.ಎಂ ಉಮಾಪತಿ ಶಾಸ್ತ್ರಿಗಳ ಸಂಪಾದಕತ್ವದಲ್ಲಿ ಶಿವಯೋಗ ಮಂದಿರದಲ್ಲಿ ಸಂಸ್ಥೆಯ ಅಚ್ಚುಕೂಟದಿಂದ ಪ್ರಕಟವಾಯಿತು. ಅದರಲ್ಲಿ ಶ್ರೀಗಳವರು ಹಲವಾರು ಲೇಖನ ಕವನಗಳು ಬರೆದು ಸಾಧಕರಿಗೆ ಸಾಹಿತ್ಯ ಸೃಷ್ಟಿಯ ಒಂದು ಹೊಸ ಹೆಜ್ಜೆ ತೋರಿಸಿದರು. ಈ ಹತ್ತೊಂಬತ್ತಕ್ಕೂ ಹೆಚ್ಚಿನ ಬರಹಗಳಲ್ಲದೆ ಅನೇಕ ಪುಸ್ತಕಗಳಿಗೆ ಆಶೀರ್ವಚನ, ಮುನ್ನುಡಿಯನ್ನು ದಯಪಾಲಿಸಿದ್ದಾರೆ.

ಶ್ರೀ ಮ.ನಿ.ಪ್ರ ಶಿವಲಿಂಗ ಶಿವಯೋಗಿಗಳ ಲೇಖನಗಳಿಗೆ ಮಹತ್ವ ಏಕೆ ಬಂದಿದೆಯಂದರೆ ಅವರು ಬರೆಯುತ್ತಿದ್ದ ಕಾಲದಲ್ಲಿ ವಿಮರ್ಶಾತ್ಮಕ, ಪರಿಚಯಾತ್ಮಕ ಲೇಖನಗಳನ್ನು ಕನ್ನಡದಲ್ಲಿ ಅಭ್ಯಾಸ ಪೂರ್ಣವಾಗಿ ಬರೆಯುವವರ ಬಹುದೊಡ್ಡ

ಕೊರತೆಯಿತ್ತು. ಅಂತಹ ಸಂಧಿಕಾಲದಲ್ಲಿ ಶ್ರೀಗಳವರು ಸಾಹಿತ್ಯ ಸೃಷ್ಠಿ ಮಾಡಿದರು.

ಶ್ರೀಗಳವರ ಭಾಷಣ ಹಾಗು ಲೇಖನಗಳಲ್ಲಿ ಕಂಡು ಬರುವ ವ್ಯತ್ಯಾಸವೆಂದರೆ ಭಾಷಣಗಳಲ್ಲಿ ಅತಿ ಸರಳರಾಗುವ ಅವರು ಲೇಖನದಲ್ಲಿ ಪಂಡಿತರಾಗುತ್ತಾರೆ. ತಮ್ಮ ವಿಚಾರಗಳಿಂದಾಗಿ ಆ ವಿಚಾರ ವ್ಯಕ್ತಪಡಿಸಲು ಆರಿಸಿಕೊಳ್ಳುವ ಶಬ್ದ ಹಾಗು ಶಬ್ದಗಳಿಂದೊಡಗೂಡಿದ ವಾಕ್ಯವೃಂದವನ್ನು ಮಾಡಿಕೊಳ್ಳುವಾಗ ಉದ್ಧೃತಗಳನ್ನು ಎತ್ತಿಕೊಳ್ಳುವಾಗ ಅವರ ಪಾಂಡಿತ್ಯ ಹೊಮ್ಮುತ್ತದೆ. ಹೀಗೆ ಶಿವಯೋಗ ಸಾಧನೆ ಮತ್ತು ಸಾಹಿತ್ಯ ಸೃಷ್ಟಿ ಎರಡು ಕ್ಷೇತ್ರದಲ್ಲಿ ಶ್ರೀ ಶಿವಲಿಂಗ ಶಿವಯೋಗಿಗಳು ಗುರು–ವಿರಕ್ತರಿಗೆ ಆದರಣೀಯ.